

(6ನೇ ಪುಟದಿಂದ)

ಭಟ್ಟರು. 'ಮೂಡಬಿದರೆಯ ಸೋನ್ಸರು ಮಾರಾಟಕ್ಕಾಗಿ ಅದರ ಗಿಡಗಳನ್ನು ತಯಾರಿಸುತ್ತಿದ್ದರು. ಅವರಲ್ಲಿಂದ, ಕಾಪುವಿನ ಮುದ್ದಣ್ಣ ನರ್ಸರಿಯಿಂದ 150 ಗಿಡಗಳನ್ನು ತಂದು ಅಡಿಕೆ ಮತ್ತು ತೆಂಗಿನ ಮರಗಳೆಡೆಯಲ್ಲಿ ಉಪ ಬೆಳೆಯಾಗಿ ನೆಟ್ಟು ಬೆಳೆಸಿದೆ' ಎನ್ನುತ್ತಾರೆ ಅವರು.



ರಂಬ್ಬಾನ್ ಶೇಕಡಾ ಐವತ್ತು ಪಾಲು ನೆರಳು, ಅಷ್ಟೇ ಬಿಸಿಲು ಬೇಕೆಂದು ಬಯಸುವ ಸಸ್ಯ. ಜತೆಗೆ ಧಾರಾಳ ನೀರು ಬೇಕು. ಬಿಸಿಲು ಹೆಚ್ಚಾದರೆ ಎಲೆಗಳು ಒಣಗಲಾರಂಭಿಸಿ ಸತ್ತು ಹೋಗುತ್ತದೆ. ಭಾರೀ ಪ್ರಮಾಣದ ಗೊಬ್ಬರವೇನೂ ಬೇಡ. ಎರೆಗೊಬ್ಬರ, ಕಾಂಪೋಸ್ಟ್ ಏನಾದರೂ ಸ್ವಲ್ಪ ಸಾಕಾಗುತ್ತದೆ. ತೋಟದ ಸುತ್ತಲೂ ನೆಟ್ಟು ಬೆಳೆಸಲಡ್ಡಿಯಿಲ್ಲ. ಈ ಮರದಲ್ಲಿ ಮೂರು ವರ್ಣದ ಹಣ್ಣು ಬಿಡುವ ಜಾತಿಗಳಿವೆ. ಕೆಂಪು, ಹಳದಿ, ಕೆಂಪು ಮಿಶ್ರಿತ ಹಳದಿ ಬಣ್ಣಗಳಿದ್ದರೂ ಹಣ್ಣಿನ ರುಚಿಯಲ್ಲಿ ವ್ಯತ್ಯಾಸವಿಲ್ಲ.

ಗಿಡ ಚೆನ್ನಾಗಿ ಬೆಳೆದರೆ ನಾಲ್ಕು ವರ್ಷಗಳಲ್ಲೇ ಹೂ ಬಿಡಲಾರಂಭಿಸುತ್ತದೆ. ಜನವರಿಯಲ್ಲಿ ಹೂ ಬಿಡಲಾರಂಭಿಸಿದರೆ ಜೂನ್ ತಿಂಗಳ ವೇಳೆಗೆ ಗೊಂಚಲು ತುಂಬ ಕಾಯಿ ಹಣ್ಣುಗಳಾಗುತ್ತವೆ. ಸೆಪ್ಟೆಂಬರ್‌ವರೆಗೆ ವಾರಕ್ಕೊಮ್ಮೆ ಕೊಯ್ಯಬಹುದು. ನಿರಂತರ 30 ವರ್ಷ ಫಸಲು ನೀಡುವ ಹಣ್ಣಿನ ಒಂದೊಂದು ಮರದಿಂದ ಒಂದು ವರ್ಷದಲ್ಲಿ 60 ಕಿಲೋದಿಂದ ಒಂದು ಕ್ವಿಂಟಾಲ್‌ವರೆಗೆ ದೊರಕುತ್ತದೆ. 'ಅಪರೂಪವಾದ ಹಣ್ಣು ಇದಾದ ಕಾರಣ ವ್ಯಾಪಾರಿಗಳು ಮುಗಿಬಿದ್ದು ಕೊಳ್ಳುತ್ತಾರೆ' ಎನ್ನುವ ಜನಾರ್ದನ ಭಟ್ಟರು 'ನಮಗೆ ಕಿಲೋಗೆ 60 ರಿಂದ 80 ರೂಪಾಯಿ ಸಿಗುತ್ತದೆ. ವ್ಯಾಪಾರಿಗಳು 120 ರಿಂದ 150 ರೂಪಾಯಿಗೆ ಮಾರುತ್ತಾರೆ. ಪೇಟೆಗೆ ಸಾಗಿಸಿ ಅರ್ಧ ಗಂಟೆಯಲ್ಲಿ ಮಾಲೆಲ್ಲ ಖಾಲಿ. ಬೆಂಗಳೂರಿನ ಸೂಪರ್ ಮಾರ್ಕೆಟ್‌ನಲ್ಲಿ ಇದಕ್ಕೆ 250 ರೂಪಾಯಿ ಬೆಲೆ ಇದೆ' ಎಂದರು.

ರಂಬ್ಬಾನ್ ಹಣ್ಣು ತಿನ್ನುವುದಾದರೆ ಬೀಜಕ್ಕೆ ಅಂಟಿಕೊಂಡಿರುವ ಬಿಳಿ ಬಣ್ಣದ ಅದರ ತಿರುಳೇ ಇನ್ನೂ ಬೇಕೆನಿಸುವಂತಿದೆ. ತಿರುಳಿನ ಪ್ರಮಾಣ ಅತ್ಯಲ್ಪ. ಸುಮಾರಾಗಿ ಕರಾವಳಿಯ ತಾಳೆ ಬೊಂಡದ ತಿರುಳಿನ ರುಚಿಯ ಹಾಗಿದೆ. ಮರದಿಂದ ಕೊಯಿದ ಹಣ್ಣು ಒಂದು ವಾರದವರೆಗೆ ಕೆಡದೆ ಉಳಿಯುತ್ತದೆ. ಹಣ್ಣಿನ ತಿರುಳನ್ನು ಬೀಜದಿಂದ ಬೇರ್ಪಡಿಸಲು ವ್ಯವಧಾನ ಇದ್ದರೆ ಜ್ಯೂಸ್ ತಯಾರಿಸಬಹುದಂತೆ. ಬೀಜದೊಂದಿಗೆ ಹಾಗೆಯೇ ತಿನ್ನಬಹುದು. ಒಗರಿಲ್ಲ. ತಿರುಳು ತಿಂದು ಉಗುಳಿದ ಬೀಜಗಳನ್ನು ಒಣಗಿಸಿಟ್ಟರೆ ಹುರಿದು ತಿನ್ನಬಹುದು. ಬಾದಾಮಿ, ಗೋಡಂಬಿಯಂತೆ ಸ್ವಾದಿಷ್ಟ. ಇದರ ಕೃಷಿ ಲಾಭದಾಯಕ ಎಂಬುದನ್ನರಿತು ಜನಾರ್ದನ ಭಟ್ಟರು 150 ಮರಗಳು ಫಸಲು ಕೊಡುತ್ತಿರುವಾಗಲೇ ಇನ್ನು 850 ಗಿಡಗಳನ್ನು ನೆಟ್ಟು ಫಸಲಿಗೆ ಅಣಿಗೊಳಿಸುತ್ತಿದ್ದಾರೆ. 3 ಜಾತಿಯ ಮರಗಳೂ ಅವರ ತೋಟದಲ್ಲಿವೆ.

ರಂಬ್ಬಾನ್ ಬೀಜದಿಂದ ಗಿಡ ತಯಾರಿಸುವುದು ಸುಲಭ. ಆದರೆ ಸಾಮಾನ್ಯ ಕೃಷಿಕರಿಗೆ ಸಮಸ್ಯೆ ಎಂದರೆ ಗಿಡ ಗಂಡಾದರೆ ಹೂ ಬಿಡುವುದುಂಟು. ಆದರೆ ಕಾಯಿ ಆಗುವುದಿಲ್ಲ. ಶೇಕಡಾ 30ರಷ್ಟು ಮರಗಳು ಗಂಡಾಗುವ ಸಂಭವ ಅಧಿಕ. ಹೀಗಾಗಿ ಗಿಡ ಯಾವುದೇ ಇರಲಿ, ಹೆಣ್ಣು ಗಿಡದ ಕೊಂಬೆಯನ್ನು ಕಸಿ ಕಟ್ಟಿ ನೆಡುವುದು ಹೆಚ್ಚು ಸೂಕ್ತ. ಗಿಡಕ್ಕೆ ಆರು ವರ್ಷವಾಗುತ್ತಲೇ ಧಾರಾಳ ಫಸಲಿಗೆ ಆರಂಭ. ರೋಗಬಾಧೆಯಿಲ್ಲ. ದಪ್ಪ ತೊಗಟೆಯಿರುವುದರಿಂದ ಹಕ್ಕಿ, ಬಾವಲಿಗಳ ಕಾಟವಿಲ್ಲ. ಚೆನ್ನಾಗಿ ಹಣ್ಣಾಗಿ ಒಂದು ವಾರವಾದರೂ ಕೆಳಗೆ ಉದುರುವುದಿಲ್ಲ. ರೈತನಿಗೆ ನಷ್ಟವಾಗುವ ಸಂಭವ ತುಂಬ ಕಡಿಮೆ. ರಂಬ್ಬಾನ್ ಹಣ್ಣು ಜೀರ್ಣಕಾರಿ, ಆರೋಗ್ಯಕರ. ಅದರಲ್ಲಿ ಸಿ ವಿಟಮಿನ್ ಸಾಕಷ್ಟಿದೆಯೆಂದು ಭಟ್ಟರು ಹೊಗಳುತ್ತಾರೆ.

ಉಪ ಬೆಳೆಯಾಗಿ ಎಲ್ಲ ರೈತರೂ ರಂಬ್ಬಾನ್ ಬೆಳೆಯಬಹುದು. ಹೆಚ್ಚಿನ ನಿಗಾ, ಪರಿಶ್ರಮವಿಲ್ಲದ ಬೆಳೆಯಾದುದರಿಂದ ಅಧಿಕ ಪ್ರಮಾಣದಲ್ಲಿ ಕೃಷಿ ಮಾಡಿ ಮಾರುಕಟ್ಟೆಗೆ ಲಗ್ಗೆ ಹಾಕಬಹುದೆನಿಸುತ್ತದೆ.